

# ನಕ್ಕುಬಿಡಿ

**ಅತ್ತೆ:** ಕವಿತಾ, ನಿಮ್ಮ ಮಾವ ಹೋದ ಮೇಲೆ ಏಕೋ ನೆಮ್ಮದಿನೇ ಇಲ್ಲ !

**ಕವಿತಾ:** ಹೌದಾ ಅತ್ತೆ, ನೀವು ಒಂದು ಸಾರಿ ಮಾವ ಜಾರಿ ಬಿದ್ದಿದ್ದ ಆ ಬೆಟ್ಟಕ್ಕೆ ಹೋಗಿ ಬನ್ನಿ, ನೆಮ್ಮದಿ ತಂತಾನೇ ಸಿಗುತ್ತೆ !

***

**ಶೀನ:** ಶಿವರಾಜು, ನೀನು ಬರೆದ 'ಹೌ ಟು ಚೇಂಜ್ ಯುವರ್ ಲೈಫ್' ಪುಸ್ತಕದ ಎಲ್ಲ ಪ್ರತಿಗಳು ಮಾರಾಟವಾದವಂತೆ. ಹೇಗೆ ಸಾಧ್ಯವಾಯಿತು ?

**ಶಿವರಾಜು:** ಓ ಅದಾ, ನನ್ನ ಪುಸ್ತಕದ ಶೀರ್ಷಿಕೆಯಲ್ಲಿ 'ಲೈಫ್' ಬದಲಾಗಿ 'ವೈಫ್' ಅಂತ ತಪ್ಪಾಗಿ ಮುದ್ರಿತವಾಗಿತ್ತು ಅಷ್ಟೆ !

***

**ರವಿ:** ಕಿಟ್ಟು ಏನು ಇವತ್ತು ಬಹಳ ಖುಷಿಯಾಗಿದ್ದೀಯಲ್ಲ?

**ಕಿಟ್ಟು:** ಏನೂ ಇಲ್ಲ ರವಿ , ನನ್ನ ಹೆಂಡತಿಗೆ ಬಾಯಿ ಹುಣ್ಣಾಗಿದೆ!

***

**ಪೊಲೀಸ್:** ಮೇಡಂ, ನಿಮ್ಮ ಗಂಡ ಪಕ್ಕದ ರೂಮಿನಲ್ಲಿದ್ದರೂ, ಕಳ್ಳ ಬಂದಾಗ ಏಕೆ ಕೂಗಲಿಲ್ಲ?

**ಆಕೆ:** ಹೇಗೆ ಕೂಗಲಿ, ನಾನು ಅವರೊಂದಿಗೆ ಮಾತು ಬಿಟ್ಟು ಬಹಳ ದಿನವಾಯಿತು!

***

**ಪತ್ನಿ:** ರೀ, ಸ್ವರ್ಗದಲ್ಲಿ ಗಂಡ ಹೆಂಡತಿಯರನ್ನು ಮಾತಾಡುವುದಕ್ಕೆ ಬಿಡುವುದಿಲ್ಲವಂತೆ!?

**ಪತಿ:** ಹೌದು, ಅದಕ್ಕೆ ಕಣೆ ಅದನ್ನು ಸ್ವರ್ಗ ಅನ್ನೋದು!

***

**ಪತಿ:** ಇವತ್ತು ಹತ್ತು ಲಕ್ಷಕ್ಕೆ ಲೈಫ್ ಇನ್ಶೂರೆನ್ಸ್ ಮಾಡಿಸಿದೆ ಕಣೆ

**ಪತ್ನಿ:** ಹೌದಾ ಒಳ್ಳೆ ಸುದ್ದಿ ಕಣ್ರಿ , ಇನ್ನು ಮುಂದೆ ನೀವು ಮನೆಯಿಂದ ಹೋಗುವಾಗ 'ರೀ ಜೋಪಾನ' ಅಂತ ಹೇಳೋದು ನನಗೆ ತಪ್ಪಿತು!

***

**ಆತ:** ಸಾರ್ ನಾನು ಬಸ್ಸಿನಲ್ಲಿ ಕುಳಿತ ಸ್ವಲ್ಪ ಸಮಯದಲ್ಲಿಯೇ ನಿದ್ರೆ ಬರುತ್ತೆ?

**ಡಾಕ್ಟರ್:** ಅದರಲ್ಲೇನು ಚೆನ್ನಾಗಿ ನಿದ್ದೆ ಮಾಡಿ

**ಆತ:** ಸಾರ್ ನಾನೇ ಆ ಬಸ್ಸಿನ ಡ್ರೈವರ್!

***

**ಆತ:** ರಾತ್ರಿ ಲೇಟಾಗಿ ಹೋಗಿದ್ದಕ್ಕೆ ನನ್ನ ಹೆಂಡತಿ ಬಾಗಿಲು ತೆಗೆಯಲೇ ಇಲ್ಲ!

**ಈತ:** ಹೋಗಲಿ, ಬೆಳಗಾದ ಮೇಲಾದರೂ ತೆಗೆದ್ಲಾ?

**ಆತ:** ಬೆಳಗಾಗುವ ಹೊತ್ತಿಗೆ ಕುಡಿದ ಮತ್ತು ಇಳಿದಿತ್ತು, ಆಮೇಲೆ ಗೊತ್ತಾಯ್ತು ನಾನು ಇನ್ನೂ ಮದುವೆಯಾಗಿಲ್ಲ ಅನ್ನೋದು!

***

**ಧರ್ಮ:** ರವಿ, ದೇವರ ಬಗ್ಗೆ ನಿನಗೆ ನಂಬಿಕೆ ಇದೆಯಾ?

**ರವಿ:** ಖಂಡಿತ ಇದೆ, ನನ್ನ ಆಸೆ ಕೂಡ ನೆರವೇರಿಸಿದ್ದಾನೆ.

**ಧರ್ಮ:** ಯಾವುದನ್ನು ನೆರವೇರಿಸಿದ?

**ರವಿ:** ನೋಡಯ್ಯಾ, ಪ್ರತಿ ತಿಂಗಳು ಸಂಬಳವನ್ನು ಹೆಂಡತಿ ಕೈಗೆ ಕೊಡಬೇಕಿತ್ತು, ಹೇಗಾದರೂ ತಪ್ಪಿಸು ಅಂತ ದೇವರನ್ನು ಬೇಡಿಕೊಂಡೆ, ಮುಂದಿನ ತಿಂಗಳು ನನ್ನ ಕೆಲಸವೇ ಹೋಯ್ತು!

***

**ಪತ್ನಿ:** ರೀ, ನಾನು ನಿಮ್ಮ ಬಾಳಿಗೆ ಒಂದು ಪುಸ್ತಕವಿದ್ದಂತೆ.

**ಪತಿ:** ಅದೇ ಕಷ್ಟ ನೋಡು, ಪುಸ್ತಕದ ಬದಲು ಕ್ಯಾಲೆಂಡರ್ ಆಗಿದ್ರೆ ಚೆನ್ನಾಗಿತ್ತು.

**ಪತ್ನಿ:** ಏಕ್ರೀ?

**ಪತಿ:** ಪ್ರತಿ ವರ್ಷ ಕ್ಯಾಲೆಂಡರ್ ಬದಲಿಸಬಹುದಲ್ಲ!

***

**ಕೇಶವ:** ಕಿಟ್ಟು, ಆ ಮ್ಯಾನೇಜರ್ ನಮ್ಮ ಕಂಪನಿ ಸೂರ್ಯಚಂದ್ರ ಇರೋತನಕ ನಡೆಯುತ್ತೆ ಅಂತ ಹೇಳಿ ಬೀಗ ಹಾಕಿದ್ದಾನೆ.

**ಕಿಟ್ಟು:** ಆ ಸೂರ್ಯಚಂದ್ರರನ್ನು ಯಾರು ಅಂತ ತಿಳ್ಕೊಂಡೆ, ಅವರು ಅಲ್ಲಿಯ ಪಾರ್ಟ್ನರ್‌ಗಳು ಇಬ್ಬರೂ ಸೇರಿ ಇವನಿಗೆ ಮೋಸ ಮಾಡಿ ದಿವಾಳಿ ಮಾಡಿಟ್ಟಿದ್ದಾರೆ!

***

**ಅರವಿಂದ:** ಮುಕುಂದ, ನಾವು ನೆಮ್ಮದಿಯಿಂದ ಇರಬೇಕಾದರೆ ಮೂರು ಕೋಟುಗಳಿಂದ ದೂರವಿರಬೇಕು.

**ಮುಕುಂದ:** ಯಾವುದಯ್ಯಾ ಆ ಮೂರು ಕೋಟು?

**ಅರವಿಂದ:** ಒಂದು ಕರಿಕೋಟು, ಇನ್ನೊಂದು ಕಾಕಿಕೋಟು, ಮತ್ತೊಂದು ಬಿಳಿಕೋಟು!

***

**ಪತ್ನಿ:** ರೀ, ಅತ್ತೆಗೂ, ಕತ್ತೆಗೂ ವ್ಯತ್ಯಾಸ ಗೊತ್ತಾ?

**ಪತಿ:** ಗೊತ್ತು, ಒಂದು ನನ್ನಮ್ಮ ಇನ್ನೊಂದು ನಿನ್ನಮ್ಮ!

**ಪತ್ನಿ:** ನೀವು ಹೇಳಿದ್ದು ಸರಿ, ನಮ್ಮಮ್ಮ ನಿಮಗೆ ಅತ್ತೆ, ನಿಮ್ಮಮ್ಮ ನನ್ನ ಪಾಲಿಗೆ ಕತ್ತೆ!

***

**ಪ್ರೇಮ:** ರಮ್ಯಾ, ನಾನು ಅವರಿಗೆ ವಿಚ್ಛೇದನ ಕೊಡಬರದಿತ್ತು.

**ರಮ್ಯ:** ಏಕೆ ಹೀಗೆ ಹೇಳ್ತಾ ಇದ್ದೀಯಲ್ಲ?

**ಪ್ರೇಮ:** ಇನ್ನೇನು ಮತ್ತೆ, ವಿಚ್ಛೇದನ ಕೊಟ್ಟು ಅವರು ಸುಖವಾಗಿ ಬದುಕುವುದಕ್ಕೆ ನಾನೇ ದಾರಿ ಮಾಡಿಕೊಟ್ಟೆನಲ್ಲ!

***

**ನ್ಯಾಯಾಧೀಶ:** ಏನಮ್ಮಾ, ನಿಮ್ಮವರನ್ನು ಕೊಲ್ಲುವುದಕ್ಕೆ ವಿಷವನ್ನೇ ಕೊಡುವುದಕ್ಕೆ ಕಾರಣ?

**ಆಕೆ:** ಅದು ಅನಿವಾರ್ಯತೆಯಾಗಿತ್ತು ಸಾರ್, ಹಿಂದೆ ಚಾಕುವಿನಿಂದ ಚುಚ್ಚಿದ್ದೆ, ಬದುಕಿಕೊಂಡು ಬಿಟ್ಟರು, ಆಮೇಲೆ ಈ ಪ್ರಯೋಗ ಮಾಡಿದೆ!

***

**ಕಮಲ:** ಗೌರಿ, ನನ್ನವರಿಗೆ ನನ್ನ ಮೇಲೆ ಪ್ರೀತಿ ಕಡಿಮೆ ಆಗಿದೆ!

**ಗೌರಿ:** ಅದನ್ನು ಯಾವ ರೀತಿಯಲ್ಲಿ ಹೇಳ್ತಿಯಾ?

**ಕಮಲ:** ಇನ್ನೇನು ಮತ್ತೆ, ಮೊದ ಮೊದಲು ಅವರು ಕಾಫಿ ಮಾಡಿಕೊಡುತ್ತಿದ್ದರು, ಈಗ ನನ್ನನ್ನು ಕಾಫಿ ಮಾಡಿಕೊಡು ಅಂತಾರೆ!

***

**ಪತ್ನಿ:** ರೀ, ನಿನ್ನೆ ನೀವು ಭಾಷಣದಲ್ಲಿ ನನಗೆ ಹೆಂಡತಿ ಮಕ್ಕಳು ಯಾರೂ ಇಲ್ಲ ಅಂತ ಹೇಳಿದಿರಂತೆ?

**ಪತಿ:** ಓ... ಅದಾ, ನೋಡೆ ನಾನು ಮದುವೆಯ ಕೆಟ್ಟ ಪರಿಣಾಮಗಳ ವಿಷಯದ ಬಗ್ಗೆ ಮಾತನಾಡಬೇಕಿತ್ತು, ಅದಕ್ಕೆ ಆ ರೀತಿ ಮಾತಾಡಿದೆ!

ಸಂಗ್ರಹ: ಶಂಕರೇಗೌಡ ತುಂಬಕೆರೆ, ಮಂಡ್ಯ

